ಹಿರಿಯ ಸಿವಿಲ್ ನ್ಯಾಯಾಧೀಶರಿವರ ನ್ಯಾಯಾಲಯ, ಕೊಡಗು ಮಡಿಕೇರಿ.

ಎಂ.ವಿ. ನಂಬರ್ಃ 32/2025

ಪಿ ಡಬ್ಲ್ಯುಃ 3

| | |
|---|---|
| ಸಾಕ್ಷಿದಾರರ ಹೆಸರು | ಸತೀಶ್ ಎಂ. |
| ತಂದೆಯ ಹೆಸರು | ಮೈದು |
| ಪ್ರಾಯ | 40 |
| ಉದ್ಯೋಗ | ಡಿ.ಬ್ಲಾಕ್ ಎಸ್ಟೇಟ್ ಮ್ಯಾನೇಜರ್ |
| ವಾಸಸ್ಥಳ | ಕೆದಕಲ್ ಗ್ರಾಮ, ಮಡಿಕೇರಿ |

**ದಿಃ06.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ.ಕೆ.ಎಸ್.ಆರ್ ವಕೀಲರಿಂದಃ**

ನಾನು ಸೆಪ್ಟೆಂಬರ್ 2023 ರಿಂದ ಕೆದಕಲ್ ಗ್ರಾಮದಲ್ಲಿ ಇರುವ ಡಿ.ಬ್ಲಾಕ್ ಎಸ್ಟೇಟ್ ಮ್ಯಾನೇಜರ್ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಮೃತ ಹರೀಶ್ ತಮ್ಮಯ್ಯ ಗೊತ್ತು. ಸದರಿಯವರು ನಮ್ಮ ಎಸ್ಟೇಟ್ ನಲ್ಲಿ ನನ್ನ ಜೊತೆ ರೈಟರ್ ಆಗಿ ಕೆಲಸ ಮಾಡುತ್ತಿದ್ದರು. ಸದರಿಯವರು ನಮ್ಮ ಎಸ್ಟೇಟ್ ನಲ್ಲಿ ಜೂನ್ 2023 ರಿಂದ ಕೆಲಸ ಮಾಡುತ್ತಿದ್ದರು. ದಿಃ01.01.2025 ರಂದು ಸದರಿಯವರು ಅಪಘಾತದಲ್ಲಿ ತೀರಿಕೊಂಡಿರುತ್ತಾರೆ. ಮೃತ ಹರೀಶ್ ತಮ್ಮಯ್ಯ ಇವರು ನಮ್ಮ ಎಸ್ಟೇಟ್ ನಲ್ಲಿ ರೈಟರ್ ಆಗಿ ಕೆಲಸ ಮಾಡುತ್ತಿದ್ದರಿಂದ ಮಾಸಿಕ 18 ಸಾವಿರ ರೂ ಹಣ ಅವರಿಗೆ ವೇತನ ಮಾಡಲಾಗುತ್ತಿತ್ತು. ವೇತನ ಹಣವನ್ನು

ಹರೀಶ್ ತಮ್ಮಯ್ಯ ಇವರ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುತ್ತಿತ್ತು. ಈ ಸಂಬಂಧ ನಾನು ನ್ಯಾಯಾಲಯದ ಮುಂದೆ ನೇಮಕಾತಿ ಆದೇಶ, ಹಾಜರಾತಿ ಪುಸ್ತಕ ಮತ್ತು ಲೆಕ್ಕ ತಖ್ತೆಯನ್ನು ಹಾಜರು ಮಾಡಿದ್ದು ಅವುಗಳನ್ನು ನಿಪಿ.15 ರಿಂದ 17 ಎಂದು ಗುರುತಿಸಿದ್ದೇನೆ.

**<u>ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀ.ಎಂ.ಎಸ್.ಬಿ ವಕೀಲರಿಂದಃ</u>**

ಹರೀಶ್ ತಮ್ಮಯ್ಯ ಇವರಿಗೆ ನೇಮಕಾತಿ ಆದೇಶ ಕೊಟ್ಟಿದ್ದಕ್ಕೆ ಅವರಿಂದ ಸಹಿ ಪಡೆದೀರಾ ಎಂದರೆ ಸಾಕ್ಷಿ ಸದರಿಯವರು ನನಗಿಂತ ಮೊದಲೇ ಸೇವೆಗೆ ಸೇರಿದ್ದರು ಎನ್ನುತ್ತಾರೆ. ಹರೀಶ್ ತಮ್ಮಯ್ಯ ಸೇವಾ ಪುಸ್ತಕವನ್ನು ಎಸ್ಟೇಟ್ ನಲ್ಲಿ ಇಟ್ಟಿದೀರಾ ಎಂದರೆ ಸಾಕ್ಷಿ ಎಸ್ಟೇಟ್ ನ ಮಾಲೀಕತ್ವ ಬದಲಾದ ನಂತರ ದಾಖಲೆ ಇಲ್ಲ ಎನ್ನುತ್ತಾರೆ. ಕೆಲಸಗಾರರ ಗುರುತಿನ ಬಗ್ಗೆ ಅವರ ಫೋಟೊವನ್ನು ಸೇವಾ ಪುಸ್ತಕದಲ್ಲಿ ಹಾಕಿದ್ದರಾ ಎಂದರೆ ಸಾಕ್ಷಿ ಪ್ರತಿದಿನ ಕೆಲಸಗಾರರು ಕೆಲಸಕ್ಕೆ ಹಾಜರಾದಾಗ ಫೋಟೊ ತೆಗೆಯುತ್ತಿದ್ದೇವು ಎನ್ನುತ್ತಾರೆ. ಸೇವಾ ದಾಖಲಾತಿಯಲ್ಲಿ ಕೆಲಸಗಾರರ ಆಧಾರ್ ಕಾರ್ಡ್ ವಿವರ ಮತ್ತು ಚುನಾವಣಾ ಗುರುತಿನ ಚೀಟಿ ವಿವರವನ್ನು ನಮೂದು ಮಾಡುತ್ತೇವೆ. ನಮ್ಮ ಎಸ್ಟೇಟ್ ಗೆ ಪ್ಲಾಂಟೇಶನ್ ಆ್ಯಕ್ಟ್ ಅನ್ವಯ ಆಗುವುದಿಲ್ಲ. ಹರೀಶ್ ತಮ್ಮಯ್ಯ ಇವರಿಗೆ ಭವಿಷ್ಯ ನಿಧಿ ಸೌಲಭ್ಯ ಇರಲಿಲ್ಲ. ಅರ್ಜಿದಾರರಿಗೆ ಸಾಹಯ ಮಾಡಬೇಕೆಂದು ನ್ಯಾಯಾಲಯದ ಮುಂದೆ ಸುಳ್ಳು ದಾಖಲೆಯನ್ನು ಹಾಜರು ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹರೀಶ್ ತಮ್ಮಯ್ಯ ಇವರು ನಮ್ಮ ಎಸ್ಟೇಟ್ ನಲ್ಲಿ ಕೆಲಸ ಮಾಡುತ್ತಿರಲಿಲ್ಲ ಎಂದರೆ

ಸರಿಯಲ್ಲ. ಸದರಿಯವರು ನಮ್ಮ ಎಸ್ಟೇಟ್ ನಿಂದ ಯಾವುದೇ ವೇತವನ್ನು ಪಡೆಯುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1ನೇ ಎದುರುದಾರರ ಪರ ಶ್ರಿ.ಬಿ.ಎಂ.ಎಸ್ ವಕೀಲರಿಂದಃ**

2ನೇ ಎದುರುದಾರರ ಪರ ಮಾಡಲಾದ ಪಾಟಿ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸರಿ.ಇದೆ.

ಸಹಿ/-

(ಸಿ.ವೀರಭದ್ರಯ್ಯ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.